(SRI VEERENDRA PATIL)

(*d*)	*Electrical*	*Diesel*
	Many applications could not be processed for want of feasibility which depends of the proximity of the wells of the applicants to the existing distribution lines.	Sanction was accorded to the extent of funds, available.
(*e*)	As the distribution system develops in the area, the remaining applications will be considered for sanction of pumpsets.	Sanction will be accorded to the extent of funds available from time to time.

ಶ್ರೀ ಟಿ. ಮಾದಯ್ಯಗೌಡ.—1953ರಿಂದ 63ರಸ್ಟೇ ಸಾಲನಪರೆಗೆ 438 ಡೀಸೆರ್ ಪಂಪ್‌ಸೆಟುಗಳಿಗೆ ಮತ್ತು 480 ಎಲೆಕ್ಟ್ರಿಕ್ ಪಂಪ್‌ಸೆಟ್ಟುಗಳಿಗೆ ಅಜಿ- ಬಂದಿರುವುದರಿಂದ ಕೇವಲ 98 ಎಲೆಕ್ಟ್ರಿಕ್ ಪವರ್ ಮತ್ತು ಕೇವಲ 154 ಡೀಸೆರ್ ಪಂಪ್‌ಸೆಟ್ಟುಗಳು ಕೊಟ್ಟಿರತಕ್ಕದ್ದು ತೀರಾ ಕಡಿಮೆ ಎನ್ನುತಕ್ಕದ್ದನ್ನು ಸರ್ಕಾರದವರು ಮನಗಂಡಿದ್ದಾರೆಯೇ ?

†ಶ್ರೀ ವೀರೇಂದ್ರ ಪಾಟೀಲ್.—ಮಾನ್ಯ ಸದಸ್ಯರ ವ್ಯಷ್ಟಿಯಲ್ಲಿ ಕಡಿಮೆಯಾಗಿರಬಹುದು, ಎರ್ನಾ ತಾಲ್ಲೂಕುಗಳಿಗೂ ಹಂಚಬೇಕಾಗುವುದರಿಂದ, ಒಂದೇ ತಾಲ್ಲೂಕಿಗೆ ಎರ್ನಾ ಹಂಚರಾಗುವುದಿಲ್ಲ. ಅರ್ಜಿಗಳು ಬರುತ್ತದೆ. ದುಡ್ಡು ಎಷ್ಟು ಇರುತ್ತದೆ ತದನ್ನು ನೋಡಿಕೊಂಡು ಹಂಚರಾಗುತ್ತಿದೆ.

ಶ್ರೀ ಟಿ. ಮಾದಯ್ಯಗೌಡ.—ರಾಮನಗರ ತಾಲ್ಲೂಕು ಅಭಾವ ಪರಿಸ್ಥಿತಿಗೆ ಒಳಗಾಗಿರತಕ್ಕಂಥ ಮತ್ತು ನೀರು ಹೆಚ್ಚಾಗಿರದೆ ತೊಂದರೆಯಾಗಿರತಕ್ಕ ತಾಲ್ಲೂಕು ಎಂದು ಸರ್ಕಾರದವರು ಮನಗಂಡಿದ್ದಾರೆಯೇ ?

ಶ್ರೀ ವೀರೇಂದ್ರ ಪಾಟೀಲ್.—ರಾಮನಗರ ತಾಲ್ಲೂಕಿನಲ್ಲಿ ಹೆಚ್ಚು ನೀರಾವರಿಯಿಲ್ಲ ಎಂದು ಸರ್ಕಾರಕ್ಕೆ ಗೊತ್ತಿದೆ. ಆ ತರದ ಅನೇಕ ಪ್ರದೇಶಗಳು ನಮ್ಮ ಸಂಸ್ಥಾನದಲ್ಲವೆ.

ಶ್ರೀ ಸಿ. ಆರ್. ರಂಗೇ ಗೌಡ.—ರಾಮನಗರ ತಾಲ್ಲೂಕಿನಲ್ಲಿ ಕಣ್ಯಾ ಕ್ಯಾಚ್‌ಮೆಂಟ್ ಏರಿಯಾ ಇರುವುದರಿಂದ ವ್ಯವಸಾಯಕ್ಕೆ ತೊಂದರೆಯಾಗುತ್ತದೆ. ಆದ್ದರಿಂದ ಹೆಚ್ಚು ಹೆಚ್ಚಾಗಿ ಎಲೆಕ್ಟ್ರಿಕ್ ಅಥವಾ ಡಿಸೇರ್‌ಪಂಪ್ ಸೆಟ್ಟುಗಳನ್ನು ಕೊಡುವುದಕ್ಕೆ ಅವಕಾಶ ಮಾಡಿಕೊಡುತ್ತೀರಾ ?

ಶ್ರೀ ವೀರೇಂದ್ರ ಪಾಟೀಲ್.—ನಾನು ಹೇಳಿದೆ. ಎಷ್ಟರಮಟ್ಟಿಗೆ ಸಾಧ್ಯವೋ ಅಷ್ಟು ಮಾಡಿದ್ದೇವೆ ; ಇನ್ನೂ ಮಾಡುವುದಕ್ಕೆ ಪ್ರಯತ್ನಮಾಡುತ್ತೇವೆ.

ಶ್ರೀ ಬಿ. ಚನ್ನಬೈರೇಗೌಡ.—ಈಗ ಪಂಪ್ ಸೆಟ್ಸ್ ಒದಗಿಸಲಿಕ್ಕೆ ಕಂಡಕ್ಟರ್ಸ್ ಟ್ರಾನ್ಸ್‌ಫಾರ್ಮರ್ಸ್ ಮತ್ತು ತಂತಿ ಅಭಾವವಿದೆ ಎಂದು ಹೇಳುತ್ತಾರೆ. ಇವನ್ನೆರ್ನಾ ಪೂರ್ತಿಯಾಗಿ ಮಾಡಿ, ಆದಷ್ಟು ಬೇಗ ಎಲ್ಲೆಲ್ಲ ಕೊಡುವುದಕ್ಕೆ ಸಾಧ್ಯವಿದೆ ಅಲ್ಲಿ ಅದನ್ನು ಕೊಡುವುದಕ್ಕೆ ಏನಾದರೂ ಏರ್ಪಾಡು ಮಾಡುತ್ತೀರಾ ?

ಶ್ರೀ ವೀರೇಂದ್ರ ಪಾಟೀಲ್.—ಈಗ ಸಾಕಷ್ಟು ಪ್ರಮಾಣದಲ್ಲಿ ತಂತಿ ಒದಗಿಸಿಕೊಳ್ಳಬೇಕೆಂದು ಪ್ರಯತ್ನ ಮಾಡುತ್ತಿದ್ದೇವೆ. ಟ್ರಾನ್ಸ್‌ಮಿಶನ್ ಲೈನ್ ಎಲ್ಲ ಇರುತ್ತದೆ, ಅಲ್ಲಿ ಸರ್ವಿಸ್ ಕೊಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

ENDOWMENT GIVEN TO THE GOVERNMENT HOSPITAL AT UDIPI.

*Q.—85. SRI B. BHASKAR SHETTY (Kaup).—

Will the Government be pleased to state :—

(*a*) whether any endowment has been given in the form of a site to the Government Hospital at Udipi ;

†Indicates that the remarks or speeches have not been revised by the member concerned.

(*b*) if so, the name of the persons who has made this endowment on the date on which it was made;

(*c*) the estimated income per month derived from this site;

(*d*) when the possession of the said site was taken by Government;

(*e*) the arrangements they have made to supervise the said site?

A.—SRI K. NAGAPPA ALVA (Minister for Health).-

(*a*) Yes:

(*b*) The gift of the property is made as per the will executed on 1st April 1944 by one Smt. Narayani (Since diseased).

(*c*) Not yet assessed.

(*d*) Not yet taken.

(*e*) This matter is being examined.

ಶ್ರೀ ಬಿ. ಭಾಸ್ಕರ ಶೆಟ್ಟಿ.—ಈ ದತ್ತಿಯನ್ನು ಕೊಟ್ಟು 2 ವರ್ಷವಾದರೂ ಕೂಡ ಇಲ್ಲಿಯವರೆಗೆ ಸರ್ಕಾರ ತೆಗೆದುಕೊಳ್ಳದಿರಲು ಕಾರಣವೇನು, ಸ್ವಾಮಿ ?

ಶ್ರೀ ಕೆ. ನಾಗಪ್ಪ ಆಳ್ವ.—ಈಗ ಎರಡು ವರ್ಷವಾಗಲಿಲ್ಲ. ಬರೀ ಎಂಟು ತಿಂಗಳು ಮಾತ್ರ ಆಯ್ತು.

Mr. SPEAKER.—This gift was made two years back. Immediate attention should be given to that.

ಶ್ರೀ ಕೆ. ಪಿ. ರೇವಣಸಿದ್ದಪ್ಪ.—ಸ್ವಾಮಿ, ಈಗಿನ ಕಾಲದಲ್ಲಿ ದಾನ ಕೊಡುವವರೇ ಕಮ್ಮಿ. ದಾನ ಕೊಟ್ಟಿದ್ದನ್ನು ಅದನ್ನು ಬಡವರ ಕಷ್ಟ ನಿವಾರಣೆಗೋಸ್ಕರ ತೆಗೆದುಕೊಳ್ಳದೆ ಹೋದದ್ದು ಅವ ಹೇಳನವೇ ಅಲ್ಲದೆ ಮತ್ತೇನು ?

Mr. SPEAKER.—The principle, whether this 'Dana' is a gift by a lady in Udipi for restricted porposes, Goverement have to consider whether it should be accepted or not. It is not a case on which more time should be spent during Question Hour today.

ಶ್ರೀ ಬಿ. ಭಾಸ್ಕರ ಶೆಟ್ಟಿ.—ಇದನ್ನು ತೆಗೆದುಕೊಳ್ಳಲು ಕಷ್ಟ ಏನು, ಸ್ವಾಮಿ ?

ಶ್ರೀ ಕೆ. ನಾಗಪ್ಪ ಆಳ್ವ.—ಶ್ರೀಪತಿ ನಾರಾಯಣಮ್ಮನವರು ಒಂದು ವಿಲ್ ಮಾಡಿದ್ದಾರೆ. ಒರಿಜಿನರ್ ಕಾಪಿ ತರಿಸಿ, ಲಾ ಡಿಪಾರ್ಟ್‌ಮೆಂಟಿಗೆ ಕಳಿಸಿ ಪರಿಶೀಲನೆಯಾಗ ಒಂದು ಮುಖ್ಯವಾದ ಕ್ಲಾರಿಫಿಕೇಷನ್ ಬೇಕಾಯಿತು. "ನನ್ನ ನಂತರ ನನ್ನ ತಾಯಿ ಬದುಕಿದ್ದರೆ, ತಾಯಿ ಸ್ವಾಧೀನ ಹೋಗಬೇಕು;" ತಾಯಿಯ ನಂತರ ಯಾರಿಗೆ ಹೋಗಬೇಕು ಎಂಬುದನ್ನು ಪರಿಶೀಲನೆ ಮಾಡಬೇಕಾಗಿದ್ದುದರಿಂದ ತಡವಾಯ್ತು. ಇದನ್ನು ಒಂದು ತಿಂಗಳೊಳಗೆ ತೆಗೆದುಕೊಳ್ಳುವುದಕ್ಕೆ ವಿಪರ್ಾಡು ಮಾಡುತ್ತೇವೆ.

Mr. SPEAKER.—Unless the mother dies it is inoperative.

Sri K. NAGAPPA ALVA.—Mother is no more. The position is clarified and verified. Now the question of procedure. It will not take more than one month to take over the possession.

ಶ್ರೀ ಬಿ. ಭಾಸ್ಕರ ಶೆಟ್ಟಿ.—ಇದರ ಮೇಲ್ವಿಚಾರಣೆ ನೋಡಲು ಯಾರನ್ನು ಬಿಟ್ಟಿದ್ದೀರಿ ?

ಶ್ರೀ ಕೆ. ನಾಗಪ್ಪ ಆಳ್ವ.—ಇದಕ್ಕೆ ಮೇಲ್ವಿಚಾರಣೆ ನೋಡುವ ಪ್ರಶ್ನೆ ಇಲ್ಲ. ಅವರ ಗಂಡ ನೋಡಿಕೊಳ್ಳುತ್ತಾರೆ.